

ಎರಡೆರಡು ಡುಬ್ಬಗಳಿರುವ ಹಿಮಾಲಯದ ಒಂಟೆಗಳು




ಸೇನಾ ಸ್ಮಾರಕಗಳು



ಭಾರತೀಯ ಸೇನೆಯ 'ಹಾಲ್ ಆಫ್ ಫೇಮ್'



ಹಿಮಾಲಯದ ಒಂಟೆಗಳನ್ನು ನೋಡಿದ್ದು.

ಪಾಂಗೊಂಗ್ ಸರೋವರದತ್ತ ಪಯಣ ಬೆಳೆಸಿದೆವು. ದಾರಿಯಲ್ಲಿ ಭೂಕುಸಿತವಾಗಿದ್ದರಿಂದ ಲೇಹ್‌ಗೆ ಹಿಂತಿರುಗಿ, ಅಲ್ಲಿಂದ ಬಳಸು ದಾರಿ ಹಿಡಿದು ಹೋಗಬೇಕಾಯಿತು. ಅಲ್ಲಿಯೂ ಒಂದೆಡೆ ಭೂಕುಸಿತ ಉಂಟಾಗಿ ಕೆಲ ಗಂಟೆಗಳ ಕಾಲ ಕಾಯಬೇಕಾಯಿತು. ಅಲ್ಲಿಗೆ ತಲುಪಿದಾಗ ರಾತ್ರಿಯಾಗಿದ್ದರಿಂದ ಸರೋವರದ ದರ್ಶನ ಭಾಗ್ಯ ಲಭಿಸಲಿಲ್ಲ.

## ಅಲ್ಚಿಯ ದಾರಿಯಲ್ಲಿ..

ಹಿಮಾಲಯದ ವಿಶೇಷವೆಂದರೆ, ಸೂರ್ಯೋದಯ ಬೆಳಿಗ್ಗೆ 5 ಗಂಟೆಗಾದರೆ ಬೆಳಕು ಮಾತ್ರ ರಾತ್ರಿ ಎಂಟು ಗಂಟೆಯವರೆಗೂ ಇರುತ್ತಿತ್ತು. ಸೂರ್ಯನ ಪ್ರಖರತೆಯ ಕಾರಣ ತಂಪು ಕನ್ನಡಕ ಧರಿಸದೆ ಓಡಾಡುವುದು ಕಷ್ಟ. ಸೂರ್ಯೋದಯವನ್ನು ಆಸ್ವಾದಿಸಲು ಪಾಂಗೊಂಗ್ ಸರೋವರದ ಕಡೆಗೆ ನಡೆದೆವು.

ಮುಂದಿನ ಪ್ರಯಾಣ ಅಲ್ಚಿಯ ಕಡೆಗೆ. ಎದುರಾದದ್ದು 'ಮ್ಯಾಗ್ನೆಟಿಕ್ ಹಿಲ್'. ರಸ್ತೆಯಲ್ಲಿ ಒಂದು ಚೌಕವನ್ನು ಬರೆದಿದ್ದಾರೆ. ಅಲ್ಲಿ ನಮ್ಮ ವಾಹನವನ್ನು ನ್ಯೂಟ್ರಲ್‌ನಲ್ಲಿ ನಿಲ್ಲಿಸಿದರೆ ಗುರುತ್ವಾಕರ್ಷಣಾ ಶಕ್ತಿಯ ವಿರುದ್ಧವಾಗಿ ಸಾಗುತ್ತದೆ! ಜಾಗದ ಮಹತ್ವವೋ, ಕಣ್ಕಟ್ಟೋ ತಿಳಿಯಲಿಲ್ಲ. ಜನ್‌ಸ್ಕಾರ್– ಸಿಂಧೂ ನದಿ ನಡುವಣ ಕಣಿವೆಯಲ್ಲಿ ಮುಂದುವರಿದೆವು.

ಅಲ್ಚಿಯಲ್ಲಿ 11ನೇ ಶತಮಾನದ ಪುರಾತನ ಬೌದ್ಧ ಗೊಂಪಾ ಇದೆ. ಮರದಲ್ಲೇ ಕಟ್ಟಲಾಗಿರುವ ಕಟ್ಟಡದ ಒಳಭಾಗದಲ್ಲಿ ವರ್ಣಚಿತ್ರಗಳಿವೆ. ಧಾರ್ಮಿಕ ಮತ್ತು ಕಲಾತ್ಮಕ ವಸ್ತುಗಳ ಮಾರಾಟ ಮಳಿಗೆಗಳಿವೆ.

ರಾತ್ರಿ ಕಳೆದು ಮತ್ತೆ ಲೇಹ್‌ನತ್ತ ಮರಳಿದೆವು. ಭಾರತೀಯ ಸೇನೆಯ 'ಹಾಲ್ ಆಫ್ ಫೇಮ್'ಗೆ ಭೇಟಿ ನೀಡಿದೆವು. ಸಿಯಾಚಿನ್‌ನಲ್ಲಿ ಸೈನಿಕರು ಬಳಸುವಂತಹ ಪರಿಕರಗಳು, ಶತ್ರು ದೇಶಗಳಿಂದ ವಶಪಡಿಸಿಕೊಂಡ ವಸ್ತುಗಳು, ಚಿತ್ರಗಳೊಂದಿಗೆ ಸೇನೆಯ ಸಾಧನೆಗಳ ವಿವರಗಳನ್ನು ನೀಡುವ ಫಲಕಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಪ್ರತಿದಿನ ಸೇನೆಯ ಒಂದು ವಿಭಾಗಕ್ಕೆ ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ನೀಡುವ ಪತ್ರ ಸಂದೇಶವನ್ನು ತಲುಪಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಹಿಂಭಾಗದಲ್ಲಿ ಪರೇಡ್ ಗ್ರೌಂಡ್ ಇದೆ. ಅಲ್ಲಿ ಸಂಜೆ ಧ್ವಜವನ್ನು ಅವರೋಹಣ ಮಾಡುವ ಮುನ್ನ ಸೈನಿಕರು ಪಥಸಂಚಲನದ ಮೂಲಕ ಗೌರವ ಸಲ್ಲಿಸುತ್ತಾರೆ. ಇಲ್ಲಿ ಯುದ್ಧದಲ್ಲಿ ಮಡಿದ ಸೈನಿಕರ ಸ್ಮಾರಕಗಳನ್ನೂ ನಿರ್ಮಿಸಲಾಗಿದೆ. ●